ಪಾಲಿಪೈಬರ್ಸ್ ಸ್ಥಾಪನೆಯ ಬಗ್ಗೆ

197 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯದ ಪಕ್ಕದಲ್ಲಿ ಸರ್ಕಾರ ವತಿಯಿಂದ ಪಾಲಿಪೈಬರ್ಸ್ ಕಾರ್ಖಾನೆ ಸ್ಥಾಪನೆಯ ವಿಚಾರ ಸರ್ಕಾರದ ಪರಿಶೀಲನೆಯಲ್ಲಿಯೇ?*

ಆ) *ಹಾಗಿದ್ದಲ್ಲಿ, 1991-92 ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದೇ*

ಇ) *ಕಾರ್ಖಾನೆಗೆ ಬೇಕಾಗುವ ಜಮೀನು ವಶಪಡಿಸಿಕೊಳ್ಳಲಾಗಿದೆಯೇ, ಹಾಗಿದ್ದಲ್ಲಿ, ಅದರ ವಿಸ್ತೀರ್ಣ ಹಾಗೂ ಸ್ಥಳದ ವಿವರ ಒದಗಿಸುವುದು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಅಥಣಿ ಮತ್ತು ಹುಕ್ಕೇರಿ ಭಾಗಗಳಲ್ಲಿ ಪಾದರಕ್ಷೆಗಳ ಖರೀದಿಯ ಬಗ್ಗೆ

211 - ಶ್ರೀ ಉಮೇಶಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಅಥಣಿ ಮತ್ತು ಹುಕ್ಕೇರಿ ಭಾಗಗಳಲ್ಲಿನ ಪಾದರಕ್ಷೆಗಳ ತಯಾರಕರ ಶೋಷಣೆ ತಪ್ಪಿಸಲು ಸರ್ಕಾರದವರು ಲಿಡ್‌ಕರ್ ವತಿಯಿಂದ ಪಾದರಕ್ಷೆಗಳನ್ನು ಕೊಂಡುಕೊಳ್ಳಲು ಕ್ರಮ ಕೈಗೊಳ್ಳುವರೆ?*

ಆ) *ಹಾಗಿದ್ದಲ್ಲಿ ಯಾವಾಗ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಲಿಡ್‌ಕರ್ ಸಂಸ್ಥೆಯು ಈಗಾಗಲೇ ಅಥಣಿ, ಮಧುಬಾವಿ ಹಾಗೂ ಸುತ್ತಲಿನ ಪ್ರದೇಶಗಳಿಂದ ಕುಶಲಕರ್ಮಿಗಳು ತಯಾರಿಸುವ ಚಪ್ಪಲಿಗಳನ್ನು ಕೊಂಡುಕೊಳ್ಳಲು ಕ್ರಮ ಕೈಗೊಂಡಿರುತ್ತದೆ. ಆದರೆ ಹುಕ್ಕೇರಿಯಲ್ಲಿ ಈ ವ್ಯವಸ್ಥೆಯು ಇನ್ನೂ ಪ್ರಾರಂಭವಾಗಿರುವುದಿಲ್ಲ. ಮುಂದೆ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಆ ಪ್ರಶ್ನೆಗೆ ಉತ್ತರಿಸಿರುವುದರಿಂದ ಉದ್ಭವಿಸುವುದಿಲ್ಲ.

ರೈತರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸರಬರಾಜಿನ ಬಗ್ಗೆ

216 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) *ರೈತರ ಪಂಪ್‌ಸೆಟ್ಟುಗಳಿಗೆ ನೀಡಬೇಕಾದಷ್ಟು ವಿದ್ಯುತ್ ನೀಡಲಾಗುತ್ತಿದೆಯೇ?*

ಆ) *ಸಾಕಷ್ಟು ವಿದ್ಯುತ್ ಸರಬರಾಜಿಲ್ಲದೆ ಬೆಳೆಗಳು ಒಣಗುತ್ತಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ದೇಶದ ಆಹಾರ ಅಭಿವೃದ್ಧಿಗೋಸ್ಕರ ರೈತರ ಪಂಪುಸೆಟ್ಟುಗಳಿಗೆ ಇಪ್ಪತ್ತನಾಲ್ಕು ಘಂಟೆ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆಮಾಡಲಾಗುತ್ತಿದೆಯೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಹೌದು

ಅ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಬೇಸಿಗೆ ತಿಂಗಳುಗಳಲ್ಲಿ ನೀರಾವರಿ ಪಂಪುಸೆಟ್ಟುಗಳ ಗ್ರಾಹಕರಿಂದ ವಿದ್ಯುತ್ ಬೇಡಿಕೆ ತೀವ್ರವಾಗಿ ಏರುತ್ತದೆ. ಈ ಬೇಡಿಕೆಯನ್ನು ಲಭ್ಯತೆಗಳನ್ನು ಸರಿದೂಗಿಸುವ ಸಲುವಾಗಿ, ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ ಆರು ಘಂಟೆಗಳ ಕಾಲ ನಿಯಮಿತ ಲೋಡ್ ಷೆಡ್ಡಿಂಗನ್ನು ರಾಜ್ಯಾದ್ಯಂತ ನಿರ್ವಹಿಸಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯ. ಆದ್ಯತೆಯ ಗ್ರಾಮಾಂತರ ಪ್ರದೇಶಗಳಿಗೆ ದಿನವಹಿ ಹದಿನೆಂಟು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲು ವ್ಯವಸ್ಥೆ ಮಾಡಿದೆ.

ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ

217 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಸಹಕಾರ ಹಾಗೂ ಖಾಸಗಿ ಸಕ್ಕರೆ ಕಾರ್ಖಾನೆಗಳನ್ನು ತೆರೆಯಲು ಪರವಾನಿಗೆ ಕೋರಿ ಬಂದ ಅರ್ಜಿಗಳೆಷ್ಟು?

ಆ) ಸದರಿ ಅರ್ಜಿಗಳನ್ನು ತಕ್ಷಣ ಮಂಜೂರಾತಿ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಸಹಕಾರಿ ರಂಗದಲ್ಲಿ ಅರ್ಜಿಗಳು ಬಂದಿರುವುದಿಲ್ಲ. ಖಾಸಗಿ ರಂಗದಲ್ಲಿ 4ಅರ್ಜಿಗಳು ಬಂದಿವೆ.

ಆ) ಮಂಜೂರಾತಿ ನೀಡುವ ಬಗ್ಗೆ ಅಂತಿಮ ತೀರ್ಮಾನ ಕೇಂದ್ರ ಸರ್ಕಾರ ಕೈಗೊಳ್ಳಬೇಕಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ "ಕವಲೆದುರ್ಗದ" ಬಗ್ಗೆ

74 - ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಕವಲೆದುರ್ಗ ಐತಿಹಾಸಿಕ ಸ್ಥಳ ಎಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತಿಸಲು ಸರ್ಕಾರ ಯಾವ ಕಾರ್ಯಕ್ರಮ ರೂಪಿಸಿದೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಸದ್ಯಕ್ಕೆ ಯಾವ ಕಾರ್ಯಕ್ರಮಗಳನ್ನು ಯೋಚಿಸಿಲ್ಲ.

ವಿಧಾನ ಸೌಧದ ಮುಂಭಾಗದಲ್ಲಿರುವ ಪಂಡಿತ್ ಜವಹರ್‌ಲಾಲ್ ನೆಹರೂರವರ ಪ್ರತಿಮೆಯ ಸಮಾರಂಭದ ಬಗ್ಗೆ.

225 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸೌಧದ ಮುಂಭಾಗದಲ್ಲಿರುವ ಪಂಡಿತ್ ಜವಹರ್‌ಲಾಲ್ ನೆಹರೂರವರ ಪ್ರತಿಮೆಯನ್ನು ಅನಾವರಣ ಮಾಡಲು ಆಗಮಿಸುವಂತೆ ರಾಜ್ಯ ಸರ್ಕಾರವು ಭಾರತದ ರಾಷ್ಟ್ರಪತಿಯವರನ್ನಾಗಲಿ ಅಥವಾ ದೇಶದ ಪ್ರಧಾನ ಮಂತ್ರಿಗಳನ್ನಾಗಲಿ ವಿನಂತಿಸಿಕೊಂಡಿತ್ತೆ?